1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

S.C.103/2017
S.C.53/2019

ದಿಃ 22.12.2021
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-14 Pw-11

| | | |
|---|---|---|
| ಹೆಸರು | ಃ | ಆಂಥೋನಿ |
| ತಂದೆಯ ಹೆಸರು | ಃ | ರಾಜು |
| ವಯಸ್ಸು | ಃ | 30 ವರ್ಷ |
| ಉದ್ಯೋಗ | ಃ | ಖಾಸಗಿ ನೌಕರಿ |
| ವಾಸಸ್ಥಳ | ಃ | ಬೆಂಗಳೂರು |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿದಾರರು ಮಹಜರ್ ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು, ಅವುಗಳನ್ನು ನಿ.ಪಿ.16 ಮತ್ತು 16(ಎ) ಎಂದು ಗುರುತಿಸಲಾಯಿತು. ಈ ಸಹಿಯನ್ನು ಮುಖ್ಯರಸ್ತೆ, ಕಾಮಾಕ್ಷಿಪಾಳ್ಯ, ಬೆಂಗಳೂರಲ್ಲಿ ಸುಮಾರು 4-5 ವರ್ಷಗಳ ಹಿಂದೆ ಪೊಲೀಸರು ಪಡೆದಿದ್ದು ಯಾವ ಕಾರಣಕ್ಕೆಂದು ಗೊತ್ತಿಲ್ಲ. ಆ ಸಮಯದಲ್ಲಿ ನ್ಯಾಯಾಲಯದ ಮುಂದಿರುವ ಯಾವುದೇ ಆರೋಪಿಗಳನ್ನು ನಾನು ನೋಡಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಥ್ವಾ ವಾಹನವನ್ನು ಜಪ್ತಿ ಮಾಡಲಿಲ್ಲ. ನಿ.ಪಿ.16ರರಲ್ಲಿರುವ ವಿಷಯಗಳು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

ದಿಃ19.10.2016 ರಂದು ಕಾಮಾಕ್ಷಿಪಾಳ್ಯದ ವೃಷಭಾವತಿನಗರದಲ್ಲಿರುವ ಶ್ರೀ ಲಕ್ಷ್ಮಿವಲ್ಲಭ ಕಲ್ಯಾಣ ಮಂಟಪದ ಹಿಂಭಾಗದ ಗಲ್ಲಿ ರಸ್ತೆಯಲ್ಲಿ ನನ್ನ ಮತ್ತು ಚಾಸಾ.15 ರವರ ಸಮಕ್ಷಮ ಮೃತ ನವೀನ್ ಕುಮಾರರನ್ನು ಕೊಲೆ ಮಾಡಲು 1 ರಿಂದ 6 ನೇ ಆರೋಪಿತರು ಸಂಚು ರೂಪಿಸಿ ಕೃತ್ಯಕ್ಕೆ ಬಳಸಿದ ಕೆಎ 03, ಪಿ2832 ಮಾರುತಿ 800 ಕಾರನ್ನು, ಕೆಎ 02, ಇಪಿ4892 ಪಲ್ಸರ್ ಬೈಕನ್ನು, ಕೆಎ 41, ಇಸಿ4343 ಹೊಂಡಾ ಆ್ಯಕ್ಟಿವಾ ದ್ವಿಚಕ್ರ ವಾಹನವನ್ನು, 4 ಕಬ್ಬಿಣದ ಮರದ ಹಿಡಿಕೆಯುಳ್ಳ ರಕ್ತ ಕಲೆಯಾಗಿದ್ದ ಲಾಂಗುಗಳನ್ನು ಪ್ರತ್ಯೇಕವಾಗಿ ಆರೋಪಿಗಳು ಹಾಜರುಪಡಿಸಿದಂತೆ ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ 'ಹೆಚ್' ಎಂಬ ಅಕ್ಷರದಿಂದ ಸೀಲ್ ಮಾಡಿ ನಮ್ಮ ಸಮಕ್ಷಮ ಮಧ್ಯಾಹ್ನ 3.30 ರಿಂದ 5.00 ಗಂಟೆವರೆಗೆ ನಿ.ಪಿ.16 ರಂತೆ ಮಹಜರ್ ಕ್ರಮ ಜರುಗಿಸಿ, ಸ್ಥಳದಲ್ಲಿಯೇ ನಮ್ಮ ಸಹಿ ಪಡೆದರು ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿಗೆ ಸೀಲ್ ಮಾಡಲಾದ ಬಿಳಿಯ ಬಟ್ಟೆಯಿಂದ 4 ಲಾಂಗುಗಳನ್ನು ನ್ಯಾಯಾಲಯದ ಅನುಮತಿಯೊಂದಿಗೆ ತೆಗೆದು ತೋರಿಸಿದ್ದು, ಸಾಕ್ಷಿ ಅವುಗಳನ್ನು ಈ

ಹಿಂದೆ ನೋಡಿಲ್ಲ ಎಂದು ಹೇಳಿದ್ದು ಸದರಿ ಲಾಂಗುಗಳನ್ನು ಮುದ್ದೆ ಮಾಲು 5ರಿಂದ 8 ಎಂದು ಗರುತಿಸಲಾಯಿತು. ಮುದ್ದೆ ಮಾಲು 5ರಿಂದ 8ಗಳ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಗುರುತಿಸಿದ್ದು, ಅವುಗಳನ್ನು ಖಾಲಿ ಕಾಗದದ ಮೇಲೆ ಪಡೆಯಲಾಗಿತ್ತು ಎಂದು ಹೇಳಿದ್ದು ಸಹಿಗಳನ್ನು ಮುದ್ದೆ ಮಾಲು 5(ಎ)ರಿಂದ 8(ಎ) ಎಂದು ಗುರುತಿಸಲಾಯಿತು. ದ್ವಿಚಕ್ರ ವಾಹನಗಳನ್ನು ನೋಡಿದರೆ ನನಗೆ ಗುರುತಿಸಲು ಬರುವುದಿಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ. ಕೆ.ವಿ.ಕೆ., ಎಸ್.ಹೆಚ್.ಎಂ., ಮತ್ತು ಟಿ.ಜಿ., ವಕೀಲರಿಂದ ಆರೋಪಿಗಳ ಪರವಾಗಿಃ ಇಲ್ಲವೆಂದಿದ್ದಾರೆ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.